**ಸಾಕ್ಷಿಯನ್ನು ದಿಃ 13.10.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 3 ನೇ ಎದುರುದಾರರ ಪರ ಶ್ರೀಮತಿ ಕೆ.ಎಲ್.ಎಸ್ ವಕೀಲರಿಂದಃ**

ಅಪಘಾತವನ್ನು ನಾನು ನೋಡಿಲ್ಲ. ಅಪಘಾತದ ಬಗ್ಗೆ ಸ್ಥಳೀಯರು ಹೇಳಿದ್ದಾರೆ ಅವರ ಹೆಸರು ಹೇಳಲಾಗುವುದಿಲ್ಲ. ದೂರನ್ನು ನಾನು ನೀಡಿಲ್ಲ. ದೂರುದಾರ ನನ್ನ ತಮ್ಮ. ಅವರು ಅಪಘಾತ ಸ್ಥಳದಲ್ಲಿ ಇರಲಿಲ್ಲ. ನನ್ನ ಮಗನೊಂದಿಗೆ ಪ್ರಯಾಣಿಸುತ್ತಿದ್ದ ಸಚಿನ್ ನಮ್ಮ ಊರಿನವರು ಹಾಗೂ ಸ್ನೇಹಿತನ ಮಗ. ಅಪಘಾತ ಆದ ಸ್ಥಳ ರಾಷ್ಟ್ರೀಯ ಹೆದ್ದಾರಿ. ನನ್ನ ಮಗ ಸಾಲಿಗ್ರಾಮ ಕಡೆಯಿಂದ ಸ್ವಗ್ರಾಮಕ್ಕೆ ಹೋಗುತ್ತಿದ್ದ. ಅಪಘಾತ ಸ್ಥಳ ನಮ್ಮ ಊರಿಗೆ ಹತ್ತಿರದ ಸ್ಥಳ ಆಗಿರುತ್ತದೆ. ಆ ರಸ್ತೆಯಲ್ಲಿ ವಾಹನ ದಟ್ಟಣೆ ಹೆಚ್ಚಿರುತ್ತದೆ. ಅಪಘಾತ ರಾತ್ರಿ 09.45 ಗೆ ಆಗಿದೆ. ಬೈಕ್ ಅನ್ನು ನನ್ನ ಮಗ ಚಲಾಯಿಸುತ್ತಿದ್ದ. ಬೈಕ್ ಟಿಪ್ಪರ್ ಲಾರಿಯ ಹಿಂಭಾಗಕ್ಕೆ ತಗುಲಿದೆ ಎಂದರೆ ಸರಿ. ಆರ್.ಟಿ.ಓ ವರದಿಯಲ್ಲಿ ನಿಪಿ. 5 ಬರೆದಿರುವ ವಿಚಾರ ಸರಿ ಇದೆ. ನನ್ನ ಮಗನ ಬೈಕ್ ಮುಂಭಾಗ ಜಖಂ ಆಗಿತ್ತು ಎಂದರೆ ಸರಿ. ಮುಂಭಾಗ ಹೋಗುತ್ತಿದ್ದ ವಾಹನದ ನಡುವೆ ಅಂತರ ಕಾಯ್ದಿರಿಸಿಕೊಂಡಿದ್ದರೆ ಅಪಘಾತ ಆಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನನ್ನ ಮಗ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಪೋಲೀಸ್ ದಾಖಲೆಗಳಲ್ಲಿ ಹೆಲ್ಮೆಟ್ ಬಗ್ಗೆ ನಮೂದಿಲ್ಲ ಎಂದರೆ ಹೆಲ್ಮೆಟ್ ಹೊಡೆದು ಹೋಗಿತ್ತು ಎನ್ನುತ್ತಾರೆ. ಆ ಬಗ್ಗೆಯೂ ನಮೂದಿಲ್ಲ ಎಂದರೆ ನನಗೆ ಗೊತ್ತಿಲ್ಲ.

2. ನಿಪಿ. 7 ಪಿ.ಎಂ ವರದಿ ಪ್ರಕಾರ ನನ್ನ ಮಗನಿಗೆ ತಲೆಗೆ ಪೆಟ್ಟಾಗಿ ಮೃತನಾಗಿದ್ದಾನೆ ಎಂದರೆ ಸರಿ. ಮೃತನ ಮೆದುಳಿನ ಒಂದಷ್ಟು ಭಾಗ ಇರಲಿಲ್ಲ ಎಂದರೆ ಸರಿ. ಚಾಲಕ ಹೆಲ್ಮೆಟ್ ಹಾಕದೇ ಅತಿವೇಗವಾಗಿ ಚಲಾಯಿಸಿದ ಕಾರಣವೇ ಮೇಲ್ಕಂಡ ಪ್ರಮಾಣದಲ್ಲಿ ಪೆಟ್ಟಾಗಿದೆ ಎಂದರೆ ಸರಿಯಲ್ಲ. ಹೆಲ್ಮೆಟ್ ಹಾಕಿಲ್ಲ ಎಂದು ಒಪ್ಪಿಕೊಂಡರೇ ಪರಿಹಾರಕ್ಕೆ ತೊಂದರೆ ಆಗುತ್ತದೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 10 ನೇ ತರಗತಿವರೆಗೆ ಕಲಿತಿದ್ದೇನೆ. ನಾನು ಕೂಲಿ ಕೆಲಸ ಮಾಡುತ್ತೇನೆ. ನನಗೆ ಇನ್ನೊಬ್ಬ ದೊಡ್ಡಮಗ ಇದ್ದಾನೆ. ನನ್ನ ದೊಡ್ಡ ಮಗ ಪಧವಿ ಕಲಿಯುತ್ತಿದ್ದಾನೆ. ಮನೆಯ ವ್ಯವಹಾರ ನಾನೇ ಮಾಡುತ್ತೇನೆ ಎಂದರೆ ನನ್ನ ಮಕ್ಕಳು ಸಹ

ಮಾಡುತ್ತಾರೆ ಎನ್ನುತ್ತಾರೆ. ನನಗೆ ವ್ಯವಸಾಯದ ಜಮೀನು ಇದೆ. ಈಗಲೂ ಅದರಲ್ಲಿ ಉತ್ಪತ್ತಿ ಮಾಡುತ್ತಿದ್ದೇವೆ. ನನ್ನ ಸಂಪಾದನೆ ಬಗ್ಗೆ ಹಾಗೂ ವೃತ್ತಿ ಬಗ್ಗೆ ಯಾವುದೇ ದಾಖಲೆ ಹಾಜರು ಪಡಿಸಿರುವುದಿಲ್ಲ. ಮೃತ ಮಗ ಯಾವುದೇ ಕೆಲಸ ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಾನು ಸಂಪಾದನೆ ಮಾಡುತ್ತಿರುವ ಕಾರಣ ನಾನು ಹಾಗೂ ಹೆಂಡತಿ ಮೃತ ಮಗನ ಅವಲಂಬಿತರಲ್ಲ ಎಂದರೆ ಸರಿಯಲ್ಲ. ಪರಿಹಾರಕ್ಕಾಗಿ ನಾವು ಅವಲಂಬಿತರಾಗಿದ್ದೇವು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಪೋಲೀಸ್ ದಾಖಲೆಗಳಲ್ಲಿ ಬರೆದಿರುವ ವಿಷಯ ತಿಳಿದುಕೊಂಡಿದ್ದೇನೆ. ಅಪಘಾತಕ್ಕೆ ನನ್ನ ಮಗನ ನಿರ್ಲಕ್ಷ್ಯತನ ಇರುವ ಕಾರಣ ನಾನು ಪರಿಹಾರಕ್ಕೆ ಅರ್ಹನಲ್ಲ ಎಂದರೆ ಸರಿಯಲ್ಲ. ಉದ್ದೇಶಪೂರ್ವಕವಾಗಿ ದಾಖಲೆಗಳು ಸೃಷ್ಟಿಸಿಕೊಂಡು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಎರಡನೇ ದ್ವಿತಿಯ ಪಿ.ಯು.ಸಿ. 2022 ರಲ್ಲಿ ಮುಗಿಸಿದ್ದ. ಅವನ ಶಾಲಾ ದಾಖಲೆಗಳನ್ನು ಹಾಜರು ಪಡಿಸಲು ತೊಂದರೆ ಇಲ್ಲ. ಪರಿಹಾರಕ್ಕಾಗಿ ಸುಳ್ಳು ಪ್ರಕರಣ ಹೂಡಿದ್ದೇನೆ ಎಂದರೆ ಸರಿಯಲ್ಲ.

2 ನೇ ಎದುರುದಾರರು ಹಾಗೂ ಅವರ ಪರ ವಕೀಲರನ್ನು ಕೂಗಿ ಕರೆಯಿಸಲಾಗಿ ಗೈರು ಹಾಜರಿದ್ದು, ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.